**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಕೆ.ಆರ್.ನಗರ**

**ಸಿ.ಸಿ. ನಂ.1237/2016**

**ಪಿರ್ಯಾದಿದಾರರುಃ** ಸಾಲಿಗ್ರಾಮ ಪೋಲಿಸರು

**- ವಿರುದ್ಧ -**

**ಆರೋಪಿತರುಃ** ಸಿದ್ದೇಗೌಡ ಬಿನ್ ಗೋಪಾಲೇಗೌಡ
ವಃ 48 ವರ್ಷ
ವಾಸಃ ಝಾನ್ಸಿ ರಾಣಿ ಲಕ್ಷ್ಮೀಬಾಯಿ ರಸ್ತೆ,
ಮಿರ್ಲೆ ಗ್ರಾಮ,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**ದಂ. ಪ್ರ. ಸಂ. ಕಲಂ 313 ರಡಿ ಆಪಾದಿತರ ಹೇಳಿಕೆ**

ಪ್ರಶ್ನೆ 1: ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀವು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2: ಫ್ರಾಸಾ.1 ಗಿರೀಶ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ19-04-2016 ಕ್ಕಿಂತ 3-4 ದಿನ ಮೊದಲು ಆರೋಪಿಯಾದ ನೀವು ತಮ್ಮ ಅತ್ತೆ ವೇದಾವತಿಯವರ ಜಮೀನಿನಲ್ಲಿರುವ ಮರ ಖರೀದಿ ಮಾಡಬೇಕೆಂದು ಮೂರು ಸಾರಿ ಕರೆ ಮಾಡಿದ್ದ ಎಂದು, ದಿನಾಂಕಃ 19-04-2016 ರಂದು ಗಂಟೆಗೆ ಮಿರ್ಲೆ ಗ್ರಾಮದ ತನ್ನ ಅತ್ತೆ ವೇದಾವತಿಯವರ ಮನೆಗೆ ಸುಮಾರು 4.00 ಹೋಗಿದ್ದಾಗ ಚಾಸಾ 2 ಮನೆಯ ಬಳಿ ಇದ್ದು ಆಗ ಆರೋಪಿಯಾದ ನೀವು ಏಕಾಏಕಿ ತಮ್ಮ ಅತ್ತೆಯ ಮನೆ ಒಳಗಡೆ ಬಂದು ತನಗೆ ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದು, ತಮ್ಮ ಕುಟುಂಬದ ಸದಸ್ಯರಿಗೂ ಸಹ ಆರೋಪಿಯಾದ ನೀವು ಬೈದಿರುತ್ತಾನೆ ಎಂದು, ತಾನು ಏಕೆ ಆ ರೀತಿ ಮಾತನಾಡುತ್ತೀಯಾ ಎಂದು ಕೇಳಿದ್ದಕ್ಕೆ ಆರೋಪಿಯಾದ ನೀವು ಹಗ್ಗದಿಂದ ತನ್ನ ಬಲ ಮುಖಕ್ಕೆ ಹೊಡೆದು ನಂತರ ಅಲ್ಲಿಯೇ ಇದ್ದ ಒಂದು ಮಚ್ಚನ್ನು ತೆಗೆದುಕೊಂಡು ಮಚ್ಚಿನ ಹಿಂಭಾಗದಿಂದ ತನ್ನ ಎಡಗಾಲಿನ ಮಂಡಿಗೆ ಹೊಡೆದು ಗಾಯಪಡಿಸಿರುತ್ತಾನೆ ಎಂದು, ಆಗ ಚಾಸಾ 2 ಮತ್ತು 3 ರವರು ಜಗಳ ಬಿಡಿಸಿರುತ್ತಾರೆ ಎಂದು, ಮಚ್ಚು ಮತ್ತು ಹಗ್ಗವನ್ನು

ಅಲ್ಲಿಯೇ ಬಿಸಾಡಿ ಪೊಲೀಸರಿಗೆ ದೂರು ನೀಡಿದರೆ ನಿನ್ನನ್ನು ಮುಗಿಸುತ್ತೇನೆ ಎಂದು ಆರೋಪಿಯಾದ ನೀವು ಬೆದರಿಕೆ ಹಾಕಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 3: ಫ್ರಾಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಆಗ ತನ್ನನ್ನು ಚಾಸಾ-4 ರವರು ಸಾಲಿಗ್ರಾಮ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು, ಮಾರನೇ ದಿನ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ ಎಂದು, ಸದರಿ ದೂರನ್ನು ಹಾಗೂ ಸಹಿಯನ್ನು ಗುರುತಿಸಿರುತ್ತಾರೆ. ದೂರು ನೀಡಿದ ದಿನವೇ ಪೊಲೀಸರು ಬಂದಿರುತ್ತಾರೆ ಎಂದು ಪೊಲೀಸರಿಗೆ ಸ್ಥಳವನ್ನು ತೋರಿಸಿದ್ದು, ಘಟನಾ ಸ್ಥಳದಲ್ಲಿದ್ದ ಹಗ್ಗ ಮತ್ತು ಮಚ್ಚನ್ನು ಪೋಲಿಸರು ಪಂಚನಾಮೆಯನ್ನು ಮಾಡಿ ವಶಪಡಿಸಿಕೊಂಡು ಮಹಜರ್ ಮಾಡಿರುತ್ತಾರೆ ಎಂದು, ಸದರಿ ಮಹಜರ್, ಕೃತ್ಯಕ್ಕೆ ಬಳಸಿದ ಹಗ್ಗ, ಮಚ್ಚನ್ನು, ಒಂದು ಪ್ಲಾಸ್ಟಿಕ್ ಹಗ್ಗವನ್ನು, ಕಬ್ಬಿಣದ ಮಚ್ಚನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 4: ಫ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಚಾಸಾ 2 ರವರ ತಂದೆ ತಾಯಿ ಮನೆಯಲ್ಲಿ ಇರದ ಕಾರಣ ತಾನು ಹೋಗಿದ್ದೆ ಎಂದು ನುಡಿಯುತ್ತಾರೆ. ತನಗೆ ಸಿಕ್ಕಾಪಟ್ಟೆ ಏಟಾಗಿತ್ತು ಎಂದು, ಆರೋಪಿಯಾದ ನೀವು ಮೂಮಾ 1 ರಿಂದ ಹೊಡೆದಾಗ ತನ್ನ ಮುಖಕ್ಕೆ ಬರೆ ಹಾಗೂ ರಕ್ತದ ಗಾಯ ಆಗಿತ್ತು, ಈ ರೀತಿ ಬಂದ ರಕ್ತ ನಾನು ಧರಿಸಿದ ಶರ್ಟಿಗೆ ತಾಗಿತ್ತು ಎಂದು, ತನ್ನ ದೂರಿನಲ್ಲಿ ಆರೋಪಿಯಾದ ನೀವು ತನ್ನ ಎಡಗಾಲಿಗೆ ಮಚ್ಚಿನಿಂದ ಹೊಡೆದಿರುವ ಬಗ್ಗೆ ತಿಳಿಸಿರುತ್ತೆನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 5: ಫ್ರಾಸಾ.2 ಸಂಜಯ್ ಇವರು ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 19-04-2016 ರಂದು ಸಂಜೆ 4.00 ಗಂಟೆಗೆ ಆರೋಪಿಯಾದ ನೀವು ಚಾಸಾ 1 ರವರಿಗೆ ಕರೆ ಮಾಡಿದ್ದರಿಂದ ಚಾಸಾ 1 ರವರು ನಮ್ಮ ಮನೆಗೆ ಬಂದಿರುತ್ತಾರೆ ಎಂದು, ಆರೋಪಿಯಾದ ನೀವು ಬಂದು ತಮಗೆ ಸೂಳೆ ಮಕ್ಕಳ, ಬೋಳಿಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಆಗ ಚಾಸಾ 1

ಏತಕ್ಕೆ ಬೈಯುತ್ತಿದ್ದೀಯಾ ಎಂದು ಕೇಳಿದಾಗ ಆಗ ಆರೋಪಿಯಾದ ನೀವು ಹಗ್ಗದಿಂದ ಚಾಸಾ-1 ರವರ ಬಲಮುಖಕ್ಕೆ ಹೊಡೆದಿರುತ್ತಾರೆ ಎಂದು, ಮನೆಯಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಮಚ್ಚಿನ ಹಿಂದುಗಡೆಯಿಂದ ಚಾಸಾ 1 ರವರ ಎಡಗಾಲಿಗೆ ಹೊಡೆದು ಗಾಯ ಮಾಡಿರುತ್ತಾರೆ ಎಂದು, ನಂತರ ಆಟೋದಲ್ಲಿ ಚಾಸಾ 1 ನ್ನು ಸಾಲಿಗ್ರಾಮ ಆಸ್ಪತ್ರೆಗೆ ಕಳುಹಿಸಿರುತ್ತೇವೆ ಎಂದು, ಮಾರನೇ ದಿನ ಚಾಸಾ-1 ಠಾಣೆಗೆ ಹೋಗಿ ದೂರು ನೀಡಿರುತ್ತಾರೆ ಎಂದು, ಸದರಿ ಮುಮಾ 1 ಮತ್ತು 2 ನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 6: ಫ್ರಾಸಾ.2 ರವರು ತಮ್ಮ ಪಾಟೀ ಸವಾಲಿನಲ್ಲಿ ಹಗ್ಗ ಮತ್ತು ಮಚ್ಚು ತಮ್ಮ ಮನೆಯಲ್ಲಿಯೇ ಇತ್ತು ಹಾಗೂ ಅವು ನಮ್ಮವೇ ಎಂದು, ಚಾಸಾ- 4 ರವರೇ ತಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 7: ಫ್ರಾಸಾ.4 ಮಹೇಂದ್ರ ಇವರು ಮುಖ್ಯ ವಿಚಾರಣೆಯಲ್ಲಿ ಎರಡು ವರ್ಷದ ಹಿಂದೆ ಆರೋಪಿಯಾದ ನಿಮ್ಮ ಮತ್ತು ಚಾಸಾ 1 ರವರ ನಡುವೆ ಸಂಜೆ ಸಮಯ ಜಗಳ ಆಗುತ್ತಿತ್ತು ಎಂದು, ಆರೋಪಿಯಾದ ನೀವು ಚಾಸಾ-1 ರವರಿಗೆ ಹಗ್ಗದಿಂದ ಹೊಡೆಯುತ್ತಿದ್ದ ಎಂದು, ಮಚ್ಚು ಅಲ್ಲಿಯೇ ಇತ್ತು ಎಂದು, ಆರೋಪಿಯಾದ ನೀವು ಚಾಸಾ 1 ರವರಿಗೆ ಬೋಳಿಮಗನೆ, ನಿನ್ನಮ್ಮನ್ ನನ್ನ ಮಾತು ಕೇಳೊದಿಲ್ಲಾ ಎಂದು ಬೈಯುತ್ತಿದ್ದ ಎಂದು, ತಾನು ಜಗಳ ಬಿಡಿಸಿ ಚಾಸಾ 1 ರವರಿಗೆ ಗಾಯವಾದ ಕಾರಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 8: ಫ್ರಾಸಾ.4 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಗಲಾಟೆಯನ್ನು ಖುದ್ದಾಗಿ ನೋಡಿರುತ್ತೇನೆ ಮತ್ತು ತನ್ನ ಮುಂದೆ ಹೊಡೆದರು ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು, ಮು.ಮಾ-1 ಮತ್ತು 2 ನ್ನು ಪೋಲಿಸರಿಗೆ ತಾನು ಮತ್ತು ಇನ್ನೊಬ್ಬರು ನೀಡಿರುತ್ತೇವೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 9: ಪ್ರಾಸಾ.5 ಸೋಮಶೇಖರ ಇವರು ಮುಖ್ಯ ವಿಚಾರಣೆಯಲ್ಲಿ ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿ ಒಂದು ವರ್ಷದ ಹಿಂದೆ ತಮ್ಮ ಗ್ರಾಮಕ್ಕೆ ಸಾಲಿಗ್ರಾಮ ಪೊಲೀಸರು ಗಲಾಟೆಯ ವಿಚಾರವಾಗಿ ಪಂಚನಾಮೆ ಮಾಡಲು ಬಂದಿದ್ದರು. ಮಿರ್ಲೆ ಮುಖ್ಯರಸ್ತೆಯಲ್ಲಿ ಆಸ್ಪತ್ರೆಯಿಂದ ಕೆಳಗಡೆ ಪಂಚನಾಮೆಯನ್ನು ಬರೆದಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 10: ಪ್ರಾಸಾ.5 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕಃ 20-04-2016 ರಂದು ತಮ್ಮ ಗ್ರಾಮಕ್ಕೆ ಚಾಸಾ-1 ಮತ್ತು ಆರೋಪಿಗೆಯಾದ ನಿಮಗೂ ಗಲಾಟೆಯಾಗಿತ್ತು, ಅದರ ಸಲುವಾಗಿ ಪಂಚನಾಮೆ ಮಾಡಲು ಬಂದಿದ್ದರು, ಆಗ ಪೋಲಿಸರು ಮು.ಮಾ-1 ಮತ್ತು 2 ನ್ನು ವಶಪಡಿಸಿಕೊಂಡು ಪಂಚನಾಮೆ ಬರೆದು ತನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 11: ಪ್ರಾಸಾ.6 ಡಾಃಮಂಜುನಾಥ ಇವರು ಮುಖ್ಯ ವಿಚಾರಣೆಯಲ್ಲಿ ದಿಃ19.04.2016 ರಂದು ತಾನು ಕರ್ತವ್ಯದಲ್ಲಿದ್ದಾಗ ಸಂಜೆ 6.45 ಗಂಟೆಗೆ ಚಾಸಾಃ1 ರವರು ತಮ್ಮ ನೆರ ಮನೆಯವರಿಂದ ಆದ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಚಾಸಾ 1 ರವರನ್ನು ಪರೀಕ್ಷೆಗೆ ಒಳಪಡಿಸಿದಾಗ ಚಾಸಾ-1 ರವರ ಬಲಕೆನ್ನೆಯಲ್ಲಿ ತರಚಿದ ಗಾಯ, ಬಲಬದಿಯ ಕುತ್ತಿಗೆಯಲ್ಲಿ ತರಚಿದ ಗಾಯ, ಎಡಕೈನ ಮುಂಗೈ ಅಲ್ಲಿ ತರಚಿದ ಗಾಯ, ಎಡಗಾಲಿಗೆ ತರಚಿದ ಗಾಯ, ಎಡಗೈನ ಮಧ್ಯದ ಮತ್ತು ಪಕ್ಕದ ಬೆರಳುಗಳ ಮಧ್ಯೆ ತರಚಿದ ಗಾಯಗಳಾಗಿದ್ದು, ತನ್ನ ಅಭಿಪ್ರಾಯದ ಪ್ರಕಾರ ಚಾಸಾ1 ರವರಿಗೆ ಆದ ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿರುತ್ತವೆ ಎಂದು, ಚಾಸಾ-1 ರವರನ್ನು ತಪಾಸಣೆ ಮಾಡಿದ ಬಗ್ಗೆ ತಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು, ಸದರಿ ಗಾಯಪ್ರಮಾಣ ಪತ್ರ ಹಾಗೂ ಸಹಿಯನ್ನು ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 12: ಪ್ರಾಸಾ.6 ರವರು ತಮ್ಮ ಪಾಟೀ ಸವಾಲಿನಲ್ಲಿ ಸಾಮಾನ್ಯವಾಗಿ ಯಾವುದಾದರೂ ವ್ಯಕ್ತಿಗೆ ಉದ್ದದ ಹಗ್ಗದಿಂದ ಹೊಡೆದರೆ ಅವನ ದೇಹದ ಹಲವು ಭಾಗಕ್ಕೆ ಗಾಯಗಳಾಗುವ ಸಾಧ್ಯತೆ ಇದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 13: ಫ್ರಾಸಾ.7 ಚಂದ್ರಶೇಖರ ಹೆಚ್.ಆರ್ ಇವರು ಮುಖ್ಯ ವಿಚಾರಣೆಯಲ್ಲಿ ಸಿದ್ದೇಗೌಡ ಬಿನ್ ಬೋರೇಗೌಡರ ಹೆಸರಿನಲ್ಲಿರುವ ಡಿಮಾಂಡ್ ರೆಜಿಸ್ಟರ್ ನ ಪ್ರತಿಯನ್ನು ನೀಡುವಂತೆ ಪೋಲಿಸರು ತನಗೆ ಅರ್ಜಿಯನ್ನು ನೀಡಿದ್ದು, ದಾಖಲೆಗಳನ್ನು ಪರಿಶೀಲಿಸಿದಾಗ ಸದರಿಯವರ ಹೆಸರಿನಲ್ಲಿ ಯಾವುದೇ ಮನೆ ಇರದಿರುವುದು ಕಂಡುಬಂದಿರುತ್ತದೆ ಎಂದು, ಸದರಿ ಸಿದ್ದೇಗೌಡರ ತಂದೆಯಾದ ಬೋರೆಗೌಡರ ಹೆಸರಿನಲ್ಲಿ ಮನೆ ಇದ್ದು, ಅದರ ಬಗ್ಗೆ ತಾನು ಪೋಲಿಸರಿಗೆ ಡಿಮಾಂಡ್ ರೆಜಿಸ್ಟರಿನ ದೃಡಿಕೃತ ನಕಲನ್ನು ನೀಡಿರುತ್ತೇನೆ ಎಂದು, ಸದರಿ ದಾಖಲೆಗಳನ್ನು ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 14: ಫ್ರಾಸಾ.7 ರವರು ತಮ್ಮ ಪಾಟೀ ಸವಾಲಿನಲ್ಲಿ ಮಿರ್ಲೆ ಗ್ರಾಮದಲ್ಲಿ ಡಿಮ್ಯಾಂಡ್ ರಿಜಿಸ್ಟರ್ ದಾಖಲೆಗಳನ್ನು ತಾನು ಪೋಲಿಸರಿಗೆ ನೀಡುವ ಪೂರ್ವದಲ್ಲಿ ಸ್ಥಳ ಪರಿಶೀಲನೆ ಮಾಡಿರುತ್ತೇನೆ ಎಂದು, ಸ್ಥಳ ಪರಿಶೀಲನೆ ಮಾಡಲು ತಾನು ಮತ್ತು ಬಿಲ್ ಕಲೆಕ್ಟರ್ ಜೊತೆಯಾಗಿ ಹೋಗಿದ್ದೇವು, ಸ್ಥಳ ಪರಿಶೀಲನೆ ಮಾಡಿ ತಾನು ಮಹಜರ್ ಮಾಡಿರುತ್ತೇನೆ ಎಂದು, ಸದರಿ ಸ್ಥಳ ಮಹಜರ್ ಗೆ ತಾನು ಅಕ್ಕಪಕ್ಕದ ಮನೆಯವರ ಸಹಿಗಳನ್ನು ಪಡೆದಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 15: ಫ್ರಾಸಾ.8 ಚಿಂದೇಗೌಡ ಇವರು ಮುಖ್ಯ ವಿಚಾರಣೆಯಲ್ಲಿ ದಿಃ 20.04.2016 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಮದ್ಯಾಹ್ನ 1-00 ಗಂಟೆಗೆ ಚಾಸಾಃ 1 ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ಸಲ್ಲಿಸಿದ ಮೇರೆಗೆ ಸದರಿ ದೂರಿನ ಸಾರಾಂಶದ ಮೇರೆಗೆ ತಾನು ಆರೋಪಿಯ ವಿರುದ್ಧ ತಮ್ಮ ಠಾಣಾ ಗುನ್ನೆ ನಂ. 45/16 ರಲ್ಲಿ ಪ್ರಕರಣ ನೊಂದಾಯಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು, ಅದೇ ದಿನ ಘಟನಾ ಸ್ಥಳಕ್ಕೆ ಹೋಗಿ ಚಾಸಾಃ5 ಮತ್ತು 6 ರವರ ಸಮಕ್ಷಮದಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 3-00 ರಿಂದ ಸಂಜೆ 4-00 ಗಂಟೆವರೆಗೆ ಮಾಡಿ ಸದರಿ ಪಂಚನಾಮೆಯಡಿಯಲ್ಲಿ ಆರೋಪಿಯಾದ ನೀವು ಬಳಸಿದ ಒಂದು ಹಗ್ಗ ಮತ್ತು ಮಚ್ಚನ್ನು ಚಾಸಾ-1 ರವರು ಹಾಜರುಪಡಿಸಿದ್ದು ಅದನ್ನು ತಾನು ಜಪ್ತಿ ಪಡಿಸಿಕೊಂಡಿರುತ್ತೇನೆ ಹಾಗೂ ಅದೇ ದಿನ ಚಾಸಾಃ 2 ರಿಂದ 4 ರವರ ಹೇಳಿಕೆಗಳನ್ನು

ಪಡೆದುಕೂಂಡಿರುತ್ತೇನೆ ಎಂದು, ನಂತರ ಠಾಣೆಗೆ ಬಂದು ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ವಸ್ತು ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ ಎಂದು, ನಂತರ ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾಃ12 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು, ಸದರಿ ಪ್ರ.ವ.ವರದಿ ಹಾಗೂ ಸಹಿಯನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 16: ಪ್ರಾಸಾ-8 ರವರು ತಮ್ಮ ಪಾಟೀ ಸವಾಲಿನಲ್ಲಿ ಘಟನೆ ನಡೆದ ಒಂದು ದಿನದ ಬಳಿಕ ಚಾಸಾ-1 ರವರು ತಡವಾಗಿ ದೂರನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 17: ಪ್ರಾಸಾ.9 ಎಸ್.ಗಂಗಾಧರ ಇವರು ಮುಖ್ಯ ವಿಚಾರಣೆಯಲ್ಲಿ ದಿಃ 25.04.2016 ರಂದು ತಾನು ಈ ಪ್ರಕರಣದ ಕಡತವನ್ನು ಚಾಸಾ-11 ರವರಿಂದ ಪಡೆದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿರುತ್ತೇನೆ ಎಂದು, ದಿನಾಂಕ 06.06.2016 ರಂದು ತಾನು ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ ಎಂದು, ದಿನಾಂಕ 13.06.2016 ರಂದು ಮಿರ್ಲೆ ಗ್ರಾಮ ಪಂಚಾಯಿತಿಯ ಪಿ.ಡಿ.ಓ ರವರಿಂದ ಕೃತ್ಯ ನಡೆದ ಮನೆಯ ಅಸೆಸ್‌ಮೆಂಟ್ ರಿಜಿಸ್ಟರ್ ನಕಲನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ ಎಂದು, ನಂತರ ಸಮಗ್ರ ತನಿಖೆಯನ್ನು ಪೂರೈಸಿ ಮೇಲ್ನೋಟಕ್ಕೆ ಆರೋಪಿಯಾದ ನಿಮ್ಮ ವಿರುದ್ದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ತಾನು ಈ ಪ್ರಕರಣದಲ್ಲಿ ಆರೋಪಿಯಾದ ನಿಮ್ಮ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಹಾಗೂ ದಾಖಲೆಗಳಲ್ಲಿರುವ ತನ್ನ ಸಹಿಯನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ.18: ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

ಉತ್ತರಃ

ಪ್ರಶ್ನೆ.15: ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?
ಉತ್ತರಃ

ಪ್ರಶ್ನೆ.16: ನಿಮಗೆ ಈ ಪ್ರಕರಣದಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳನ್ನು ಸಲ್ಲಿಸುವುದು ಇದೆಯಾ?
ಉತ್ತರಃ

(ಈ ಮೇಲೆ ಹೇಳಿದ ಸಾಕ್ಷಿಯ ಹೇಳಿಕೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡು ದೃಢೀಕರಿಸಲಾಯಿತು)

ದಿನಾಂಕಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಕೃಷ್ಣರಾಜನಗರ.